Development of Kannada

132. SRI T. R. SHAMANNA (Basavanagudi).—Will the Minister for Education be pleased to state :—

(*a*) the amount spent during the last 3 years (year wise) for Kannada Development ;

(*b*) the progress made to make Kannada as medium of instruction in schools and also Kannada as official language ;

(*c*) the facilities being given to Commerce Institutions in Karnataka for development of Kannada Typewriting and Kannada Shorthand ?

SRI B. SUBBAYYA SHETTY (Minister for Education).—

(*a*) The amount spent during the last 3 years is as under.—

Year	*Amount spent*
1975-1976	Rs. 6,49,000.00
1976-1977	Rs. 13,20,741.00
1977-1978	Rs. 11,26,392.50

(*b*) In a majority of schools both in urban and rural areas, the medium of instruction is in the regional language *i.e.* Kannada. Provision has also been made to teach Kannada from III Standard to those children whose mother-tongue is not Kannada. At the Secondary level, according to the revised syllabus introduced from 1978-79, Kannada is introduced as a third language for those whose mother-tongue is not Kannada. It enjoys the same status as Hindi as the third language. Failure in III language Kannada does not affect the result in any examination.

The progress made to make Kannada as official language is as detailed below :

(i) The following basic literature in Kannada was supplied to Government offices :—

(a) Karnataka Civil Service Rules

(b) Karnataka Financial Code

(c) Karnataka Treasury Code—Vol. I & II

(d) Manual of Contingent Expenditure.

(ii) The following reference material in Kannada was also supplied to Government offices :—

(a) Kacheri Kaipidi

(b) Madari Pathragalu

(c) Kannada Teerpugalu

(d) Important 27 Kannada versions of Law Books like Indian Penal Code, Criminal Procedure Code, Evidence Act, Land Reforms Act and Land Revenue Act.

(e) Training and Publicity literature

(f) Karyalaya Deepika

(iii) Glossaries of technical terms of 45 Departments have been prepared, printed and supplied to concerned Departments to facilitate them to use Kannada as official language in the respective Departments.

(iv) The number of officers/officials trained in the use of Kannada in noting and drafting was as under :—

(a) Officers	...	3,119
(b) Officials	...	13,780
(c) Middle level officers	...	169
(d) Officials of Secretariat	...	257
(e) Non-Kannada knowing minority staff	...	57

(v) 17 District level and 192 Taluk level Seminars on the use of Kannada were organised to create public interest in the use of Kannada.

(vi) 57 Presiding Officers of Judicial Courts, Revenue Courts and Tribunals have pronounced 1580 judgements in Kannada. Prizes for best judgements ranging from Rs. 400 to Rs. 1500 were also awarded.

(vii) The officers/officials and also offices were awarded prizes during 1976-77 and 1977-78 for having put in their best efforts in the use of Kannada as official language.

(viii) About 2800 Kannada Typewriters were supplied to various Governments offices.

(ix) A scheme of massive training of Government officials all over the State in Kannada Typewriting has been approved to give training to 1800 officials every year.

The steps taken as detailed above have equipped the Government machinery to switch over to the use of Kannada in administration. Already 90 per cent of correspondence at Taluka level is in Kannada 25 per cent at Sub-divisional and District level and 5 per cent at State level.

Government have issued an order that from 1st January 1977 Kannada only should be used in all correspondence at Taluka and Sub-divisional levels and all Government offices and that use of English should be reduced to the minimum. It is also ordered that in higher offices Kannada correspondence both with public as well as lower offices should be responded in Kannada only. Boards, Corporations and other Local Bodies have also been requested to use Kannada in their official business.

Instructions have been issued recently to use Kannada at State Government level also for issue of simple orders like promotions/postings, transfers/sanction of leave/advances, etc.

(c) (1) Award of scholarships to candidates learning Kannada Shorthand :

Rs. 15 per student in Senior Grade Rs. 10 per student in Junior Grade	100 Scholarships in each grade tenable for 10 months in a year.

(2) Grant of financial assistance to Commerce Institutes at the rate of Rs 1000 per Institute which presents not less than 10 students for Kannada Shorthand Examination.

(3) Outriget grant of Rs. 350 as subsidy to a Commerce Institute for purchase of one Kannada Typewriter.

ಶ್ರೀ ಟಿ. ಆರ್. ಶಾಮಣ್ಣ.—ಮಾನ್ಯ ಸಭಾಪತಿಗಳೇ, ಕನ್ನಡ ರಾಜ್ಯದಲ್ಲಿ ಕನ್ನಡವನ್ನು ಅಭಿವೃದ್ಧಿ ಗೊಳಿಸುವುದಕ್ಕೋಸ್ಕರ ನಾನು ಕೆಲವು ಪ್ರಶ್ನೆಗಳನ್ನು ಕೇಳಿದ್ದೇನೆ ಅದಕ್ಕೋಸ್ಕರ ಮಾನ್ಯ ಮಂತ್ರಿಗಳು ದೀರ್ಘವಾದ ಒಂದು ಪ್ರಭಂದವನ್ನೇ ನಮ್ಮ ಮುಂದೆ ಇಟ್ಟಿದ್ದಾರೆ. ನಮಗೆ ಸ್ವಾತಂತ್ರ್ಯ ಒಂದೂ ೩೨ ವರ್ಷಗಳಾಯಿತು, ವಿಶಾಲ ಕರ್ನಾಟಕ ಆಗಿ ೨೧ ವರ್ಷವಾಯಿತು. ತಾವುವರ್ಷದಿಂದ ವರ್ಷಕ್ಕೆ ಸುಮಾರು ೧೦–೧೨ ಲಕ್ಷ ರೂಪಾಯಿಗಳನ್ನು ಇದಕ್ಕಾಗಿ ಖರ್ಚು ಮಾಡುತ್ತಿದ್ದೀರಿ. ಹಾಗಿದ್ದರೂ ಕೂಡ ಇನ್ನೂ ಕನ್ನಡವನ್ನು ತಾಲ್ಲೂಕು ಮಟ್ಟದಲ್ಲಿ ಮಾತ್ರ ಆಡಳಿತ ಭಾಷೆಯನ್ನಾಗಿ ಉಪಯೋಗಿಸುತ್ತಿದ್ದಾರೆಯೇ ಹೊರತು, ಡಿವಿಷನ್ ಲೆವೆಲ್‌ನಲ್ಲಿ, ಕೇಂದ್ರ ಆಡಳಿತ ಲೆವೆಲ್‌ನಲ್ಲಿ ಇನ್ನೂ ಇದು ಬಳಕೆಯಾಗುತ್ತಿಲ್ಲ. ಕೇವಲ ೫ ಪರ್ಸೆಂಟ್ ಮಾತ್ರ ಕೇಂದ್ರ ಆಡಳಿತದಲ್ಲಿ ಕನ್ನಡವನ್ನು ಬಳಸುತ್ತಿದ್ದಾರೆ. ಕಳೆದ ೨೦ ವರ್ಷ ಗಳಲ್ಲಿ ಇದರ ಬಗ್ಗೆ ಆಗಿರುವ ಪ್ರಗತಿಯನ್ನು ಮಾನ್ಯ ವಿಧಾ. ಮಂತ್ರಿಗಳು ಹೆಚ್ಚಿಕೊಂಡಿದ್ದಾರೆಯೇ? ಹಾಗಿಲ್ಲದೇ ಹೋದ ಪಕ್ಷದಲ್ಲಿ ಇದು ಇನ್ನೂ ಉನ್ನತ ಮಟ್ಟದಲ್ಲಿ ಪ್ರಗತಿಯಾಗುವುದಕ್ಕೆ ಏಚಿತವಾದ ಉತ್ತರವನ್ನು ಮಾನ ಮಂತ್ರಿಗಳು ನೀಡುವರೇ?

† ಶ್ರೀ ಬಿ. ಸುಬ್ಬಯ್ಯ ರೈ.—ಸರ್ಕಾರದವರಾದರೂ ಸಹ ಆಡಳಿತದಲ್ಲಿ ಕನ್ನಡ ಭಾಷೆ ಹೆಚ್ಚು ಹೆಚ್ಚಾಗಿ ಬಳಕೆಯಲ್ಲಿ ಬರಬೇಕು ಎಂದು ಹೇಳುವ ಉದ್ದೇಶವನ್ನಿಟ್ಟುಕೊಂಡು ಇದಕ್ಕೆ ಇಷ್ಟು ಹಣ ಎಂದು ನಿಗಧಿಪಡಿಸಿಕೊಂಡು, ಖರ್ಚು ಮಾಡುತ್ತಾ ಬಂದಿದ್ದೇವೆ. ಈ ಉದ್ದೇಶ ಏನು ಇದೆ, ಇದು ಪ್ರಾಮಾಣಿಕ ವಾಗಿದೆ; ಎಂದು ನಾನು ಮಾನ್ಯ ಸದಸ್ಯರಿಗೆ ಹೇಳಬಯಸುತ್ತೇನೆ. ಇಷ್ಟರವರೆಗೆ ನಾವು ಏನು ಅಚೀವ್ ಮಾಡಿದ್ದೇವೆ, ಎಂದು ಹೇಳುವುದರ ಬಗ್ಗೆ ಬಹುಶಃ ನಾವು ಸ್ಪೆಕ್ಟಾಕ್ಯುಲರ್ ಅಚೀವ್‌ಮೆಂಟ್ ಮಾಡಿದ್ದೇವೆ ಎಂದು ನಾವು ಹೇಳುವುದಿಲ್ಲ, ಆದರೆ ಗ್ರ್ಯಾಜುಯಲ್ ಆಗಿ ನಾವು ಈ ಒಂದು ಹಂತಕ್ಕೆ ಬರುತ್ತಿದ್ದೇವೆ. ವರ್ಷದಿಂದ ವರ್ಷಕ್ಕೆ ನಮ್ಮ ಅಧಿಕಾರಿಗಳಲ್ಲಿಯೂ ಕೂಡ ಎಲ್ಲಾ ಮಟ್ಟಗಳಲ್ಲಿ ಕನ್ನಡವನ್ನು ಉಪಯೋಗ ಮಾಡಬೇಕು ಎಂದು ಹೇಳುವ ಮನೋ-ಭಾವ ಇತ್ತೀಚೆಗೆ ಬಹಳ ಗುರಾ ವನ್ನು ವುದನ್ನು ನಾವು ಗುರುತಿಸಿಕೊಂಡಿದ್ದೇವೆ.

ಶ್ರೀ ಟಿ. ಆರ್. ಶಾಮಣ್ಣ.—ನೆರೆ ರಾಜ್ಯಗಳಾದ ತಮಿಳುನಾಡು, ಮಹಾರಾಷ್ಟ್ರ ಮತ್ತು ಕೇರಳದಲ್ಲಿ ಆಗಲೇ ತಮ್ಮ ತಮ್ಮ ಭಾಷೆಯನ್ನು ರಾಜ್ಯ ಭಾಷೆಯನ್ನಾಗಿ ಮಾಡಿಕೊಂಡು ಆಡಳಿತ ನಡೆಸುತ್ತಿದ್ದರೂ ಕೂಡ ನಮ್ಮ ಕರ್ನಾಟಕದಲ್ಲಿ ಕನ್ನಡ ರಾಜ್ಯಭಾಷೆಯಾಗಿ ಆಡಳಿತ ನಡೆಸುವಲ್ಲಿ ಇನ್ನೂ ಕಾರ್ಯಗತವಾಗುತ್ತಿಲ್ಲವೇಕೆ ಎನ್ನುವುದನ್ನು ತಿಳಿಸುತ್ತೀರಾ?

ಶ್ರೀ ಬಿ. ಸುಬ್ಬಯ್ಯಶೆಟ್ಟಿ.—ಆಲ್ಲಿಗೂ ಇಲ್ಲಿಗೂ ತುಲನಾತ್ಮಕವಾಗಿ ನಾನು ಏನೂ ಹೇಳಬಯಸುವುದಿಲ್ಲ ಹೀಗೆ ಇದೆಯೆಂದು ನಾನು ಕಂಡುಕೊಂಡಿಲ್ಲ. ಆದರೆ ಇಲ್ಲಿ ಯಾವ ರೀತಿ ಮಾಡಲಾಗುತ್ತಿದ್ದೇವೆಂದು ಮಾತ್ರ ನಾನು ತಿಳಿಸಿದ್ದೇನೆ.

ಶ್ರೀ ಪಿ. ರಾಮದೇವ್.—ಇಲ್ಲಿ ಬಹಳ ಉದ್ದವಾದ ಉತ್ತರವನ್ನು ಕೊಟ್ಟಿದ್ದೀರಿ ಮತ್ತು ಇದರಲ್ಲಿ ಪ್ರಾಮಾಣಿಕತನ ಇದೆಯೊಂದು ಹೇಳುತ್ತೀರಿ. ಆದರೆ ನಮಗೆ ಅನ್ನಿಸುತ್ತದೆ, ನೀವು ಕೇವಲ ಘೋಷಣೆಗಳನ್ನು ಮಾಡುತ್ತೀರೇ ವಿನಹ ನಿಮ್ಮಲ್ಲಿ ಪ್ರಾಮಾಣಿಕತನ ಎಂದು. ಇದಕ್ಕೆ ಒಂದು ವಿಚಾರವನ್ನು ತಮ್ಮ ಗಮನಕ್ಕೆ ತರುವುದಾದರೆ, ನಾನು ಎಲ್ಲಾ ರಾಜ್ಯಗಳಲ್ಲೂ ಪ್ರವಾಸ ಮಾಡಿನೋಡಿದ್ದೇನೆ, ಅಲ್ಲಿ ಆಯಾಯ ರಾಜ್ಯ ಭಾಷೆಯೇ ಆಡಳಿತ ಭಾಷೆಯಾಗಿದೆಯೇ ವಿನಹ ಇಂಗ್ಲೀಷ್ ಆಗಲಿ, ಹಿಂದಿಯಾಗಲೀ ಇಲ್ಲ. ಆದರೆ ನಮ್ಮ ಕರ್ನಾಟಕದಲ್ಲಿ ಸ್ವಾತಂತ್ರ್ಯ ಬಂದು ಹಿರಿ ವರ್ಷಗಳಾದರೂ ಕೂಡ ಕನ್ನಡ ಆಡಳಿತ ಭಾಷೆಯಾಗಲಿಲ್ಲ. ಆದ್ದರಿಂದ, ನಾನು ಈ ಸಂದರ್ಭದಲ್ಲಿ ಕೇಳುವುದು ಏನೆಂದರೆ ಕೇವಲ ಘೋಷಣೆಗಳನ್ನು ಮಾಡುವುದು, ಆದೇಶವನ್ನು ಹೊರಡಿಸುವುದರ ಬದಲು ಈ ಸದನದ ಒಂದು ಸಮಿತಿಯನ್ನು ಮಾಡಿ, ಕನ್ನಡವನ್ನು ಅಭಿವೃದ್ಧಿ ಮಾಡಿ ಅದನ್ನು ಆಡಳಿತ ಭಾಷೆಯನ್ನಾಗಿ ಏಕೆ ಜಾರಿಗೆ ತರಬಾರದು ಎಂದು.

ಶ್ರೀ ಬಿ. ಸುಬ್ಬಯ್ಯಶೆಟ್ಟಿ.—ಅದು ಮಾನ್ಯ ಸದಸ್ಯರ ಸಲಹೆ.

ಶ್ರೀ ಮಳ್ಳೂರು ಆನಂದರಾವ್.—ಇಲ್ಲಿ ಸುಮಾರು ೨೮೦೦ ಕನ್ನಡ ಬೆರಳಚ್ಚು ಯಂತ್ರಗಳನ್ನು ಬೇರೆ ಬೇರೆ ಇಲಾಖೆಗಳಿಗೆ ಸರಬರಾಜು ಮಾಡಿದ್ದೇವೆ ಎಂದು ಹೇಳಿದ್ದೀರಿ. ಆದರೆ ಅವುಗಳ ಪೈಕಿ ಎಷ್ಟು ಬೆರಳಚ್ಚು ಯಂತ್ರಗಳು ಉಪಯೋಗಿಸಲ್ಪಡುತ್ತಿವೆ ಮತ್ತು ಎಷ್ಟು ಹಾಗೆ ಉಳಿದಿವೆ? ಎರಡನೆಯದಾಗಿ ಕನ್ನಡ ಶೀಘ್ರಲಿಪಿ ಮತ್ತು ಬೆರಳಚ್ಚನ್ನು ಯಾರು ಮಾಡಿಕೊಳ್ಳುತ್ತಾರೋ ಅವರಿಗೆ ಬೇಕಾದಷ್ಟು ಸ್ಕಾಲರ್‌ಷಿಪ್ ಕೊಟ್ಟಿದ್ದೀರಿ. ಆದರೆ ಯಾರ್ಯಾರು ಈ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿದ್ದಾರೋ ಅವರೆಲ್ಲರಿಗೂ ಉದ್ಯೋಗಗಳನ್ನು ಕೊಟ್ಟಿದ್ದೀರಾ? ಕೊಡದಿದ್ದರೆ, ಕೊಡುವುದಕ್ಕೆ ವ್ಯವಸ್ಥೆ ಮಾಡುತ್ತೀರಾ?

ಶ್ರೀ ಬಿ ಸುಬ್ಬಯ್ಯಶೆಟ್ಟಿ.—ಕನ್ನಡ ಬೆರಳಚ್ಚು ಯಂತ್ರಗಳನ್ನು ಏನು ನಾವು ಸರಬರಾಜು ಮಾಡಿದ್ದೇವೆ ಅಪ್ಪಗಳೆಲ್ಲವನ್ನು ವಿದ್ಯಾ ಇಲಾಖೆಯಲ್ಲಿ ಮಾತ್ರವಲ್ಲ, ಬೇರೆ ಬೇರೆ ಎಲ್ಲ ಇಲಾಖೆಗಳಲ್ಲೂ ಉಪಯೋಗ ಮಾಡುತ್ತಿದ್ದಾರೆಂದು ತಿಳಿದು ಬಂದಿದೆ. ಇನ್ನು ತೇರ್ಗಡೆಯಾದ ಎಲ್ಲರಿಗೂ ಉದ್ಯೋಗಾವಕಾಶವನ್ನು ಕೊಡಲಿಕ್ಕೆ ಸಾಧ್ಯವಾಗುವುದಿಲ್ಲ. ಏಕೆಂದರೆ ಹುದ್ದೆಗಳು ಎಷ್ಟವೆಯೋ ಅಷ್ಟನ್ನು ಮಾತ್ರ ಭರ್ತಿ ಮಾಡುತ್ತೇವೆಯೇ ಹೊರತು ತೇರ್ಗಡೆಯಾದವರೆಲ್ಲರಿಗೂ ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ. ಜೊತೆಗೆ ಎಷ್ಟು ಮಂದಿ ತೇರ್ಗಡೆಯಾದವರಿದ್ದಾರೆಂದು ಕೂಡ ಗೊತ್ತಿಲ್ಲ. ಒಟ್ಟಿನಲ್ಲಿ, ಪ್ರತಿ ವರ್ಷ ಹೆಚ್ಚು ಹೆಚ್ಚು ಹುದ್ದೆಗಳು ಸೃಷ್ಟಿ ಆಗಿ ಹೆಚ್ಚು ಹೆಚ್ಚು ಜನರಿಗೆ ಉದ್ಯೋಗಾವಕಾಶಗಳು ದೊರೆಯಲಿಕ್ಕೆ ಅನುಕೂಲವಾಗಲಿದೆ.

ಶ್ರೀ ಜೆ. ಬಿ. ಶಂಕರ್‌ರಾವ್.—ಇಷ್ಟು ವರ್ಷವಾದರೂ ಕೂಡ ಕನ್ನಡವನ್ನು ಆಡಳಿತ ಭಾಷೆಯನ್ನಾಗಿ ಮಾಡಬೇಕೆಂಬ ವಿಚಾರದಲ್ಲಿ ಪ್ರಗತಿಯನ್ನು ಸಾಧಿಸಿರುವುದು ತೃಪ್ತಿಕರವಾಗಿ ಕಂಡುಬರುವುದಿಲ್ಲ. ಯಾವುದೇ ಒಂದು ಯೋಜನೆಯಾದರೂ ಇಂತಿಷ್ಟು ವರ್ಷದಲ್ಲಿ ಪೂರ್ಣ ಮಾಡಬೇಕೆಂದು ಒಂದು ಅವಧಿ ಇರುತ್ತದೆ. ಅದೇ ರೀತಿ ಈ ಕನ್ನಡವನ್ನು ಇಷ್ಟು ವರ್ಷದಲ್ಲಿ ಆಡಳಿತ ಭಾಷೆಯನ್ನಾಗಿ ಮಾಡುತ್ತೇವೆಂಬ ಅಂದಾಜು ಅವಧಿ ಏನಾದರೂ ಇದೆಯೆ? ಮತ್ತು ಆ ದಿಸೆಯಲ್ಲಿ ತ್ವರಿತವಾಗಿ ಕಾರ್ಯಕ್ರಮವನ್ನು ಇಟ್ಟುಕೊಂಡು ಯೋಜನೆಯನ್ನು ಪೂರ್ತಿ ಮಾಡುವುದಕ್ಕೆ ಏನಾದರೂ ಯೋಚನೆ ಮಾಡಿದ್ದೀರಾ?

ಶ್ರೀ ಬಿ. ಸುಬ್ಬಯ್ಯಶೆಟ್ಟಿ.—ಇಷ್ಟೇ ಸಮಯದಲ್ಲಿ, ಇಂಥ ಒಂದು ನಿರ್ದಿಷ್ಟವಾದ ಅವಧಿಯಲ್ಲಿ ಮಾಡುತ್ತೇವೆಂದು ನಾವು ಏನು ಯೋಜನೆಯನ್ನು ಹಾಕಿಕೊಂಡಿಲ್ಲ. ಆದರೆ ಇದಕ್ಕೆ ಬೇಕಾದ ನಾನಾ ರೀತಿಯ ಕಾರ್ಯಕ್ರಮವನ್ನು ಕೊಂಡಿದ್ದೇವೆಂಬುದನ್ನು ನಾವು ತಮಗೆ ವಿವರವಾಗಿ ಕಾಣಿಸಿದ್ದೇವೆ. ಬಹುಶಃ ಅದನ್ನು ತಾವು ಪರಿಶೀಲಿಸಿಕೊಂಡಿದ್ದಿರೆಂದು ಕೂಡ ನಾನು ತಿಳಿದುಕೊಂಡಿದ್ದೇನೆ. ಆದರ

ಬಗ್ಗೆ ತಾವು ಏನು ಟೀಕೆ ಮಾಡಲಿಲ್ಲ. ಈ ಬಾಬಿಗಾಗಿ ಇತ್ತೀಚೆಗೆ ಪ್ರತಿ ವರ್ಷ ವಿರ್ಚಾಗುತ್ತಿರುವುದನ್ನು ನೋಡಿದರೆ ವರ್ಷವರ್ಷವೂ ಇದರ ಅಭಿವೃದ್ಧಿ ಆಫೀಸಿಯಲ್ ಲೈನ್‌ನಲ್ಲಿ ಎಷ್ಟರಮಟ್ಟಿಗೆ ಆಗುತ್ತಿದೆ ಎಂಬುದು ಸ್ಪಷ್ಟವಾಗುತ್ತದೆ; ಮತ್ತು ಹಿಂದೆ ಇಷ್ಟಾಗಿ ವಿರ್ಚಾಗದೆ ಇರುವುದನ್ನು ನೋಡಿದರೆ ಇದನ್ನು ಜಾರಿಗೆ ತರಲಿಕ್ಕೆ ಅಷ್ಟೊಂದು ತಯಾರಾಗಿರಲಿಲ್ಲವೆಂಬುದು ಕಾಣುತ್ತದೆ. ಈ ಸಂದರ್ಭದಲ್ಲಿ ಅಂಕೆ ಅಂಶಗಳನ್ನು ಕೊಟ್ಟರೆ ತಮಗೆ ಚನ್ನಾಗಿ ಮನವರಿಕೆಯಾಗುತ್ತದೆಂದು ಭಾವಿಸಿದ್ದೇನೆ. ೧೯೭೫-೭೬ ರಿಂದ ೧೯೭೭-೭೮ರವರೆಗೆ ಪ್ರತಿ ವರ್ಷ ೧೫ ಲಕ್ಷ ರೂಪಾಯಿಗಳನ್ನು ನಿಗಧಿಪಡಿಸಲಾಗಿದೆ. ೧೯೭೫-೭೬ರಲ್ಲಿ ೧೫ ಲಕ್ಷದ ಪೈಕಿ ಕೇವಲ ೬.೪೯ ಲಕ್ಷ ರೂಪಾಯಿಗಳನ್ನು ಉಪಯೋಗಿಸಲಾಗಿದೆ. ೧೯೭೬-೭೭ರಲ್ಲಿ ಅದು ೧೫ ಲಕ್ಷದ ೨೦ ಸಾವಿರಕ್ಕೆ ಬಂತು. ಅಂದರೆ ಪಂತಹಂತವಾಗಿ it is gathering momentum. I entirely agree with the view that there should be a greater will on the part of the administration to put this into effect. That I entirely agree.

ಶ್ರೀ ಜೆ. ಹೆಚ್. ಪಟೇಲ್.—ಕನ್ನಡವನ್ನು ರಾಜ್ಯಭಾಷೆಯನ್ನಾಗಿ ಮಾಡುತ್ತೇವೆ, ಸರ್ಕಾರದ ಆಡಳಿತ ಭಾಷೆಯನ್ನಾಗಿ ಮಾಡುತ್ತೇವೆಂಬ ಘೋಷಣೆಯನ್ನು ಮಾಡಿ ಸಾಕಷ್ಟು ವರ್ಷಗಳಾದವು. ಆದರೆ ಇಲ್ಲಿ ಬಂದಿರುವ ಸಮಸ್ಯೆ ಏನೆಂದರೆ, ಅದನ್ನು ಆಚರಣೆಗೆ ಕೊಡುವುದು, ಜೊತೆಗೆ ಆಚರಣೆಗೆ ಕೊಡಲು ಬೇಕಾದಂತಹ ಮನಸ್ಸು. ಇಲ್ಲಿ ಮುಖ್ಯವಾಗಿ ಬೇಕಾಗಿರುವುದು ಮನಸ್ಸು. ಇದೆಲ್ಲಾ ಎಲ್ಲಿ ಆಡಕ ಪಾಗಿದೆ ಎಂದರೆ ಐ.ಎ.ಎಸ್. ಅಧಿಕಾರಿಗಳ ಮಟ್ಟದಲ್ಲಿ. ಕನ್ನಡ ಯಾವ ಕಾರಣದಿಂದಲೋ ಬೆಂಗಳೂರಿಂ ವಿಧಾನಸೌಧದಿಂದ ಕೆಳಗೆ ಇಳಿದು ಹೋಗುತ್ತಿಲ್ಲ. ತಹಶೀಲ್ದಾರ ಕಛೇರಿಯಲ್ಲಿ ಹೇಗೆ ತಾನು ಕನ್ನಡದಲ್ಲಿ ವ್ಯವಹಾರವನ್ನು ಮಾಡಬೇಕೆಂಬ ಪ್ರಜ್ಞೆ ಇದೆಯೋ ಇದೇ ತರಹ ಪ್ರಜ್ಞೆ ಬರುವಂತೆ ರಾಜ್ಯಮಟ್ಟದ ಎಲ್ಲ ಇಲಾಖೆಯ ಉನ್ನತ ಅಧಿಕಾರಿಗಳ ಮೇಲೆ ಏನಾದರೂ ನಿಯಮ ಹಾಕಿದ್ದೀರಾ? ಇಂಥ ನಿಯಮವನ್ನು ಇಲ್ಲಿ ಹಾಕದೆ ಕೇವಲ ತಾಲ್ಲೂಕು ಮತ್ತು ಜಿಲ್ಲಾ ಮಟ್ಟದಲ್ಲಿ ಹಾಕಿದರೆ ಇನ್ನು ನೂರು ವರ್ಷ ಗಳಾದರೂ ಕೂಡ ಕನ್ನಡವನ್ನು ಆಡಳಿತ ಭಾಷೆಯನ್ನಾಗಿ ಜಾರಿಗೆ ತರುವುದಕ್ಕೆ ಸಾಧ್ಯವಾಗುವುದಿಲ್ಲ. ನಿಮಗೆ ಇರುವುದು ವ್ಯಾಮೋಹ ಇಂಗ್ಲೀಷಿನ ಬಗ್ಗೆ. ಒಟ್ಟಿನಲ್ಲಿ, ಪಾಸ್ಟವಿಕವಾಗಿ ಈ ಬಗ್ಗೆ ಏನಾದರೂ ಕ್ರಮ ಕೈಗೊಳುತ್ತೀರೋ ಇಲ್ಲವೋ ಹೇಳಿ?

ಶ್ರೀ ಬಿ. ಸುಬ್ಬಯ್ಯಶೆಟ್ಟಿ.—ನಾನು ಈಗಾಗಲೇ ಸರ್ಕಾರದ ಉದ್ದೇಶವನ್ನು ಸ್ಪಷ್ಟಪಡಿಸಿದ್ದೇನೆ. ಜೊತೆಗೆ ಅಂಕಅಂಶಗಳನ್ನು ಕೂಡ ಓದಿ ಹೇಳಿದ್ದೇನೆ. It is gathering momentum. There should be a greater will on the part of the administration to implement this. We are trying to instil that spirit in the minds of the Officers to effectively implement the programmes.

ಶ್ರೀ ಟಿ. ಆರ್. ಶಾಮಣ್ಣ.—ಮಾನ್ಯ ಸಭಾಧ್ಯಕ್ಷರೇ, ನಾನು ಕರ್ನಾಟಕದಲ್ಲಿ ಶಿಕ್ಷಣಲಿಪಿ ಮತ್ತು ಬೆರಳಚ್ಚನ್ನು ಹೇಳಿಕೊಡುತ್ತಿರತಕ್ಕ ವಾಣಿಜ್ಯ ವಿದ್ಯಾಶಾಲೆಗಳ ಸಂಘಕ್ಕೆ ಸುಮಾರು ೩೦ ವರ್ಷದಿಂದ ಅಧ್ಯಕ್ಷನಾಗಿದ್ದೇನೆ. ಮತ್ತು ಹಲವಾರು ವರ್ಷಗಳಿಂದ ನಾನೂ ಒಂದು ವಾಣಿಜ್ಯ ವಿದ್ಯಾಶಾಲೆಯನ್ನು ನಡೆಸಿಕೊಂಡುಬರುತ್ತಿದ್ದೇನೆ. ಆದ್ದರಿಂದ ಮಾನ್ಯ ಮಂತ್ರಿಗಳಿಗಿಂತ ಸ್ವಲ್ಪಮಟ್ಟಿನ ಅರಿವು ಈ ವಿಷಯದಲ್ಲಿ ನನಗೆ ಹೆಚ್ಚಾಗಿದೆ ಎಂದು ಹೇಳಿದರೆ ಅವರು ತಪ್ಪಾಗಿ ಭಾವಿಸಲಾರರು. ಈಗ ಕನ್ನಡ ಆಡಳಿತ ಭಾಷೆಯಾಗಬೇಕು, ಮಾಧ್ಯಮ ಭಾಷೆಯಾಗಬೇಕು ಎಂದು ಹೇಳುವಾಗ ಅದು ಇನ್ನೂ ಆಗದೇ ಇರುವುದಕ್ಕೆ ಮುಖ್ಯ ಕಾರಣ ಮಾನ್ಯ ಜೆ. ಎಚ್. ಪಟೇಲರು ಹೇಳಿದಹಾಗೆ ಸರ್ಕಾರದ ಪಿರಿಯ ಅಧಿಕಾರಿಗಳು ಎಂದು ಸ್ಪಷ್ಟವಾಗಿ ನಾನೂ ಹೇಳುತ್ತೇನೆ. ಅದಕ್ಕೆ ಒಂದು ಉದಾಹರಣೆಯನ್ನು ಹೇಳುತ್ತೇನೆ. ಕಳೆದ ೨೦ ವರ್ಷಗಳ ಹಿಂದೆಯೇ ನಗರ ಕಾರ್ಪೊರೇಷನ್ನಿನಲ್ಲಿ ಕನ್ನಡ ಆಡಳಿತ ಭಾಷೆಯಾಗ ಬೇಕೆಂ ಎಂದು ತೀರ್ಮಾನ ತೆಗೆದುಕೊಂಡರೂ ಮೂರು ಬಾರಿ ಅಲ್ಲಿ ಆಡಳಿತಾಧಿಕಾರಿಗಳು ಅಧಿಕಾರ ವಹಿಸಿಕೊಂಡಾಗ ಕೆಲವೇ ದಿನಗಳಲ್ಲಿ ಕನ್ನಡ ಟೈಪ್‌ರೈಟರುಗಳು ಸ್ಟೋರ್ ರೂಮಿಗೆ ಹೋಗುತ್ತಿದೆ ಯೆಂಬುದು ನಮಗೆ ಗೊತ್ತಾಯಿತು. ಚುನಾಯಿತ ಪ್ರತಿನಿಧಿಗಳಿರುವಾಗ ಇವು ಬಳಕೆಯಲ್ಲಿದ್ದು ಅವರು ಹೋಗಿ, ಆಡಳಿತಾಧಿಕಾರಿಗಳು ಅಧಿಕಾರ ವಹಿಸಿಕೊಂಡಾಗ ಟೈಪ್‌ರೈಟರ್‌ಗಳು ಮೂಲೆಗೆ ಹೋಗುತ್ತವೆ. ಎಂದರೆ ಇಂಗ್ಲೀಷಿನ ವ್ಯಾಮೋಹ ಎಷ್ಟರಮಟ್ಟಿಗೆ ಇರುತ್ತದೆ ಎಂಬುದು ಇದರಿಂದ ವ್ಯಕ್ತವಾಗುತ್ತದೆ, ಸಮ್ಮಿಲ್ಲಿ ಅನೇಕ ಅಧಿಕಾರಿಗಳಿಗಿರುವ ಇಂಗ್ಲೀಷಿನ ವ್ಯಾಮೋಹ ಹಾಗೂ ಅನೇಕ ಮಂತ್ರಿಗಳಿಗಿರುವ

ಇಂಗ್ಲೀಷಿನ ಮಾಧ್ಯಮದಿಂದ ಕನ್ನಡ ಆಡಳಿತ ಭಾಷೆಯಾಗುವುದು ತಡವಾಗುತ್ತಿದೆ. ಆದ್ದರಿಂದ ಇದನ್ನು ತಪ್ಪಿಸಿ ಆದಷ್ಟು ಬೇಗ ಆಡಳಿತ ಭಾಷೆ ಮಾಡುವುದಕ್ಕೆ ಮತ್ತು ಮಾಧ್ಯಮ ಭಾಷೆ ಮಾಡುವುದಕ್ಕೆ ತೀವ್ರವಾದ ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತೀರಾ? ಉತ್ತರ ಇಂಡಿಯಾಕ್ಕೆ ಹೋದಾಗ ಅಲ್ಲಿ ಇಂಗ್ಲೀಷಿನಲ್ಲಿ ಮಾತನಾಡಿದಾಗ ಅವರಿಗೆ ಇಂಗ್ಲೀಷ್ ಗೊತ್ತಿದ್ದರೂ ಕೂಡ ಟಿಕೆಟ್ ಕೊಡಿ ಎಂದು ಇಂಗ್ಲೀಷಿನಲ್ಲಿ ಕೇಳಿದರೆ ಕೊಡುವುದಿಲ್ಲ. ಅನೇಕ ಸಾರಿ ತುಚ್ಛವಾಗಿ ಕಾಣುತ್ತಾರೆ. ಅವರಿಗೆ ಅಪರ ಭಾಷೆಯ ಮೇಲೆ ಅಭಿಮಾನ ಇರುತ್ತದೆ. ಆದರೆ ನಮ್ಮಲ್ಲಿ ಹಾಗಿಲ್ಲ. ಸುಮಾರು ೨,೫೦೦ ಜನ ವಿದ್ಯಾರ್ಥಿಗಳು ಕನ್ನಡ ಶೀಘ್ರಲಿಪಿ ಮತ್ತು ಬೆರಳಚ್ಚನ್ನು ಕಲೆತು ಕೆಲಸವಿಲ್ಲದೇ ಇದ್ದಾರೆ ಎಂದು ಅಧಿಕೃತವಾಗಿ ಹೇಳುತ್ತೇನೆ. ಆದ್ದರಿಂದ ಕನ್ನಡದಲ್ಲಿ ಆಡಳಿತ ನಡೆಸಿ ಕನ್ನಡ ಜನಕ್ಕೆಗೆ ಅನುಕೂಲವಾಗುವ ಹಾಗೆ ಎಲ್ಲಾ ರೀತಿಯಲ್ಲಿ ಯಾವುದಾದರೂ ಕಾರ್ಯಕ್ರಮಗಳನ್ನು ಹಾಕಿಕೊಂಡು ಕ್ರಮ ತೆಗೆದುಕೊಳ್ಳುತ್ತೀರಾ? ಸುಮ್ಮನೆ ಲಕ್ಷಾಂತರ ರೂಪಾಯಿ ಖರ್ಚು ಮಾಡಿದರೆ ಪ್ರಯೋಜನವಿಲ್ಲ. ಕಠಿಣವಾದ ನೀತಿಯನ್ನು ಅನುಸರಿಸದೇ ಇದ್ದರೆ ಆಡಳಿತ ಭಾಷೆಯನ್ನಾಗಿ ಮಾಡುವುದಕ್ಕೆ ಕನಸು ಮನಸ್ಸಿನಲ್ಲಿಯೂ ಸಾಧ್ಯವಾಗುವುದಿಲ್ಲ. ಆದ್ದರಿಂದ ಸರ್ಕಾರ ತೀವ್ರವಾದ ಕಾರ್ಯಕ್ರಮವನ್ನು ಈ ಬಗ್ಗೆ ತೆಗೆದುಕೊಳ್ಳುತ್ತದೆಯೇ ಎಂದು ಕೇಳುತ್ತಿದ್ದೇನೆ?

ಶ್ರೀ ಬಿ. ಸುಬ್ಬಯ್ಯಶೆಟ್ಟಿ.—ನಾವು ತಕ್ಕ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುತ್ತೇವೆ ಎಂಬ ಮಾತನ್ನು ಈಗಾಗಲೇ ಹೇಳಿದ್ದೇನೆ. ಇದರ ಬಗ್ಗೆ ಇನ್ನೂ ಹೆಚ್ಚಿನ ಸಮಾವನ್ನು ಸರ್ಕಾರ ತೆಗೆದುಕೊಳ್ಳುತ್ತದೆಂದು ಹೇಳುವುದಕ್ಕೆ ಇಚ್ಛಿಪಡುತ್ತೇನೆ.

Stipendiary Service to Un-Employed Graduates

165. SRI J. H. PATEL (Chennagiri).—Will the Minister for Labour and excise be pleased to state :—

(*a*) the number of unemployed graduates in the State who have been provided with employment on sitpendiary basis for the last three years ;

(*b*) the number of applicants and the criteria for their employment on stipendiary basis?

SRI R. S. PATIL (Minister for Labour and Excise).—

(*a*) Employment was provided to 1,300 unemployed graduates and diploma holders as on 31st March 1978.

(*b*) According to the stipendiary scheme, the unemployed graduates and Diploma holders who have no earning member in the family and who's income is not exceeding to Rs. 3,600 per annum are eligible for employment under this scheme. No applications were invited from them. The details of unemployed graduates and Diploma holders who had registered their names in the State Employment Exchanges as on 30th September 1977 were obtained and their eligibility was got verified by the concerned Block Development Officer. Such list was forwarded to all the Deputy Commissioner and the appointing Authorities of all the Departments at District level. The total number of eligible candidates is about 20,000.